ಅಸಲು ದಾವೆ ನಂ.27/2023

ಪಿ.ಡಬ್ಲೂಃ 1– ಮಹಾಲಕ್ಷ್ಮಮ್ಮ ಕೋಂ ಲೋಕೇಶ್

ದಿನಾಂಕಃ 09/06/2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು 1 ರಿಂದ 3 ನೇ ಪ್ರತಿವಾದಿಯರ ಪರವಾಗಿ ಶ್ರೀಟಿ.ಎನ್.ಎಂ.ವಕೀಲರಿಂದ**

1. ನಾನು ಪಿ.ಯು.ಸಿ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಸಾಮಾನ್ಯವಾಗಿ ನಾನು ಒಂದು ದಾಖಲೆಗೆ ಸಹಿ ಮಾಡುವಾಗ ದಾಖಲೆಯನ್ನು ಓದಿ ತಿಳಿದುಕೊಂಡು ನಂತರ ಅದಕ್ಕೆ ಸಹಿ ಹಾಕುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಆದರೆ 2015 ರಲ್ಲಿ 2 ನೇ ಪ್ರತಿವಾದಿಯು ನನಗೆ ದಾಖಲೆಯನ್ನು ಓದಲು ಅವಕಾಶ ಕೊಡದೇ ನನ್ನಿಂದ ಅದಕ್ಕೆ ಸಹಿ ಮಾಡಿಸಿಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ಈಗೆ ನಾನು 2015 ರ ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಸಹಿ ಹಾಕಿರಬಹುದು. ಆ ದಿನ ಸದರಿ ದಾಖಲೆಗೆ ನಾನು ಮತ್ತು ಪ್ರತಿವಾದಿಯಲ್ಲೆರೂ ಸಹಿ ಹಾಕಿರುತ್ತೇವೆ. ಸದರಿ ದಾಖಲೆಯು ವಿಭಾಗ ಪತ್ರ ಆಗಿತ್ತು ಎಂದು ನನಗೆ ಸಹಿ ಹಾಕಿದ 4 ವರ್ಷಗಳ ನಂತರ ಗೊತ್ತಾಗಿರುತ್ತದೆ.

2. ಈಗ ನಾನು ಮತ್ತು ಪ್ರತಿವಾದಿಯಲ್ಲೆರೂ ಅನ್ಯೋನ್ಯವಾಗಿರುತ್ತೇವೆ ಎಂದರೆ ಸರಿಯಲ್ಲ. ನಾನು ಈಗ ಸುಮಾರು 8 ವರ್ಷಗಳ ಹಿಂದೆ ನಮ್ಮ ತಾಯಿಯಾದ 1 ನೇ ಪ್ರತಿವಾದಿಯನ್ನು ಕೊನೆಯ ಸಲ ಮಾತನಾಡಿಸಿರುತ್ತೇನೆ. ಈ ದಾವೆ ದಾಖಲಿಸಿದ ನಂತರ ಕೇವಲ ಒಂದು ಬಾರಿ ಮಾತ್ರ ನಾನು ಪ್ರತಿವಾದಿಯರ ಮನೆಗೆ ಹೋಗಿರುತ್ತೇನೆ ಕಾರಣ ಅವರು ನನ್ನನ್ನು ಪೂಜೆಗಾಗಿ ಕರೆದಿದ್ದರು. ಈ ದಾವೆ ದಾಖಲಿಸಿ 2-3 ವರ್ಷಗಳಾಗಿರುತ್ತವೆ. ಈಗ ನನ್ನ ಮತ್ತು ಪ್ರತಿವಾದಿಯರ ಮಧ್ಯ ಫೋನು ಸಂಪರ್ಕ ಇರುವುದಿಲ್ಲ. ಈಗ 1 ವರ್ಷದ ಹಿಂದೆ 3 ನೇ ಪ್ರತಿವಾದಿಯ ಮಗಳಾದ ಗೌರಿಪ್ರಿಯರವರ ಪುಷ್ಪವತಿ ಆದ ಬಗ್ಗೆ ಆರತಿ ಕಾರ್ಯಕ್ರಮ ಆಗಿದ್ದು ನಾನು ಅದಕ್ಕೆ ಹೋಗಿದ್ದೆ ಎಂದರೆ ಸರಿ ಆದರೆ ಅದು ಚೌಟರಿಯಲ್ಲಿ ಆಗಿತ್ತು. ಸದರಿ ಕಾರ್ಯಕ್ರಮದಲ್ಲಿ ಪ್ರತಿವಾದಿಯಲ್ಲೆರೂ ಉಪಸ್ಥಿತರಿದ್ದರು ಎಂದರೆ ಸರಿ. ಸದರಿ ಕಾರ್ಯಕ್ರಮಕ್ಕೆ ನಾನು ಮತ್ತು ಪ್ರತಿವಾದಿಯಲ್ಲೆರೂ ಸೇರಿ ಮಾತನಾಡಿಕೊಂಡು ಜೊತೆಯಲ್ಲಿ ಹೋಗಿದ್ದೆವು ಎಂದರೆ ಸರಿಯಲ್ಲ.

3. ನನಗೆ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಸದರಿಯವರಿಬ್ಬರಿಗೂ ಮದುವೆಯಾಗಿರುತ್ತದೆ. ನನ್ನ ಹಿರಿಯ ಮಗಳಾದ ಕಾವ್ಯ ರವರು ಪ್ರತಿವಾದಿಯರ ಮನೆಯಲ್ಲಿಯೇ ಇದ್ದು ತಮ್ಮ ಪಿ.ಯು.ಸಿ. ವಿದ್ಯಾಭ್ಯಾಸ ಮುಗಿಸಿರುತ್ತಾರೆ ಎಂದರೆ ಸರಿ. ನಂತರ ಸದರಿ ಕಾವ್ಯರವರು ಪದವಿಗಾಗಿ ಬೆಂಗಳೂರಿನ ಮಹಾರಾಣಿ ಕಾಲೇಜಿಗೆ ಸೇರಿದ್ದು ಅಲ್ಲಿ ಅವರಿಗೆ ಓದಲು ಆಗದೇ ಇದ್ದ ಕಾರಣ ಅವರು ತರೀಕೆರೆಗೆ ಬಂದು ತಮ್ಮ ಪದವಿ ಮುಗಿಸಿದರು ಎಂದರೆ ಸರಿ. ಪದವಿ ಮುಗಿದ ನಂತರ 1 ನೇ ಪ್ರತಿವಾದಿಯೇ ಮುಂದೆ ನಿಂತುಕೊಂಡು ಕಾವ್ಯರವರ ಮದುವೆ ಮಾಡಿರುತ್ತಾರೆ ಎಂದರೆ ಸರಿ ಆದರೆ ನಾನು ಸಹ ಅದಕ್ಕೆ ಸಹಾಯ ಮಾಡಿರುತ್ತೇನೆ.

4. ನಾವು ಬೆಂಗಳೂರಿನಲ್ಲಿ ವಾಸವಾಗಿದ್ದು ಅಲ್ಲಿ ನನ್ನ ಗಂಡನಿಗೆ ಒಳ್ಳೆಯ ಕೆಲಸ ಮತ್ತು ದುಡಿಮೆ ಇರುವುದಿಲ್ಲ ಎಂದರೆ ಸರಿ. ನಾನು ಸಹ ಮನೆಕೆಲಸ ಮತ್ತು ಕೂಲಿ ಕೆಲಸ ಮಾಡುತ್ತಿದ್ದು ನನ್ನ ಆದಾಯದಿಂದ ನಮ್ಮ ಮನೆ ನಡೆಯುತ್ತದೆ ಎಂದರೆ ಸರಿ. ಕಾವ್ಯರವರ ಮದುವೆಗೆ ಸುಮಾರು

5-6 ಲಕ್ಷ ರೂಪಾಯಿಗಳು ಖರ್ಚು ಆಗಿದ್ದು ಅದನ್ನು ಸಂಪೂರ್ಣವಾಗಿ 1 ನೇ ಪ್ರತಿವಾದಿಯೇ ಮಾಡಿರುತ್ತಾರೆ ಎಂದರೆ ಸರಿಯಲ್ಲ ಆದರೆ ಸುಮಾರು 3 ಲಕ್ಷ ರೂಗಳಷ್ಟು ಖರ್ಚು ಅವರು ಮಾಡಿರುತ್ತಾರೆ. ಸದರಿ ಮದುವೆಯಲ್ಲಿ 1 ನೇ ಪ್ರತಿವಾದಿಯು ಕಾವ್ಯರವರಿಗೆ ಸುಮಾರು 80 ಗ್ರಾಂ ಚಿನ್ನ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ ಆದರೆ 60 ಗ್ರಾಂ ಚಿನ್ನ ಕೊಟ್ಟಿರುತ್ತಾರೆ. ನನ್ನ ಗಂಡನ ಆರ್ಥಿಕ ಪರಿಸ್ಥಿತಿ ಚೆನ್ನಾಗಿರದೇ ಇರುವುದರಿಂದ ನನ್ನ ತವರು ಮನೆಯವರೇ ಅಂದರೆ ಪ್ರತಿವಾದಿಯರೇ ನನಗೆ ಮೊದಲಿನಿಂದಲೂ ಇಂದಿನವರೆಗೂ ಆರ್ಥಿಕವಾಗಿ ಸಹಾಯ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ.

5. ದಾವಾ ಸ್ವತ್ತುಗಳೆಲ್ಲವೂ ನಮ್ಮ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಆಗಿರುತ್ತವೆ ಎಂದರೆ ಸರಿ. ಮೇಲೆ ಹೇಳಿದ ವಿಭಾಗ ಪತ್ರದ ಆಧಾರದ ಮೇಲೆ ಎಲ್ಲರ ಹೆಸರಿನಲ್ಲಿ ಸ್ವತ್ತುಗಳಿಗೆ ಖಾತೆಗಳು ಆಗಿರುತ್ತವೆ ಎಂದರೆ ನನ್ನ ಹೆಸರಿನಲ್ಲಿ ಖಾತೆ ಆಗಿರುವುದಿಲ್ಲ ಅದರೆ ಪ್ರತಿವಾದಿಗಳ ಹೆಸರಿನಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ನನ್ನ ಮತ್ತು 4 ನೇ ಪ್ರತಿವಾದಿಯ ಹಿಸ್ಸೆಗೆ ಒಂದು ಸೈಟು ಕೊಟ್ಟಿರುತ್ತಾರೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಸದರಿ ಸೈಟಿನ ಖಾತೆಯನ್ನು ಈಗ 4 ನೇ ಪ್ರತಿವಾದಿಯು ತಮ್ಮ ಹೆಸರಿನಲ್ಲಿ ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಸೈಟಿಗೆ ನನ್ನ ಹೆಸರನ್ನು ಸಹ ದಾಖಲಿಸಿಕೊಳ್ಳಲು ನಾನು 2022 ರಲ್ಲಿ ಅರ್ಜಿ ಸಲ್ಲಿಸಿದ್ದೆ. ಸದರಿ ಅರ್ಜಿಯ ನಕಲನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ಸೈಟನ್ನು ನಾನು ಪ್ರತ್ಯಕ್ಷವಾಗಿ ಭೇಟಿ ಕೊಟ್ಟು ನೋಡಿರುತ್ತೇನೆ. ಅದು ಈಗಲೂ ಸಹ ಖಾಲಿ ಇರುತ್ತದೆ ಎಂದರೆ ಸರಿ. ಸದರಿ ಸೈಟಿಗೆ ಈಗ ಸುಮಾರು 25-30 ಲಕ್ಷ ರೂಗಳಷ್ಟು ಮಾರುಕಟ್ಟೆ ಬೆಲೆ ಇರುತ್ತದೆ ಎಂದರೆ ಸರಿಯಲ್ಲ ಆದರೆ 15-16 ಲಕ್ಷ ರೂಪಾಯಿಗಳ ಬೆಲೆ ಇರಬಹುದು. ಈಗ ಸದರಿ ಸೈಟಿನ ಅರ್ಧ ಭಾಗದ ಖಾತೆಯು ನನ್ನ ಹೆಸರಿಗೆ ದಾಖಲಾದರೆ ನಾನು ಈ ದಾವೆಯನ್ನು ವಾಪಸ್ಸು ಪಡೆದುಕೊಳ್ಳುತ್ತೇನೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅರ್ಧ ಸೈಟು ಮತ್ತು ನಷ್ಟ ಪರಿಹಾರದ ರೂಪದಲ್ಲಿ ನನಗೆ ಪ್ರತಿವಾದಿಯರು ರೂ.6 ಲಕ್ಷಗಳನ್ನು ಕೊಟ್ಟರೆ ನಾನು ದಾವೆ ವಾಪಸ್ಸು ತೆಗೆದುಕೊಳ್ಳುತ್ತೇನೆ ಎಂದು ನುಡಿಯುತ್ತಾರೆ.

6. ಮೇಲೆ ಹೇಳಿದ ವಿಭಾಗ ಪತ್ರವು ನೋಂದಣಿ ಆಗಿದ್ದು ಮತ್ತು ಅದನ್ನು ನನ್ನ ಒಪ್ಪಿಗೆಯಿಂದ ಮಾಡಿದ್ದು ಮತ್ತು ಅದು ಕಾನೂನು ಬದ್ಧವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ಸದರಿ ವಿಭಾಗ ಪತ್ರಕ್ಕೆ ಸಹಿ ಮಾಡಿದ್ದು ನನಗೆ ಅದರ ಬಗ್ಗೆ ನಂತರ ಗೊತ್ತಾಗಿರುತ್ತದೆ ಎಂದು ನಾನು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಂದ ಅಕ್ರಮ ಲಾಭ ಮಾಡಿಕೊಳ್ಳಲು ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಮುಜಫರ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತರೀಕೆರೆ